**OS. No.61/2013**
**P.W-1**

**( ದಿನಾಂಕ.12-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಹೇಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸರಿಯಾಗಿದ್ದು ಅದನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ.

ರಾಮಬಾಬು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಸರ್ಟಿಪೀಕೆಟ ಇದೆ ಅದನ್ನು ನಿಪಿ-1 ಎಂದು, ರಾಮಬಾಬುವಿನ ಮರಣ ದಾಖಲೆ ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ರಾಮಬಾಬು ಮತ್ತು ಅವರ ಹೆಂಡತಿ ಪದ್ಮಾ ಇವರ SB ಖಾತೆಯ ಎಕ್ಸಟ್ರ್ಯಾಕ್ಟ ಹಾಜರುಪಡಿಸಿದ್ದು ಅದು ನಿಪಿ-3 ಎಂದು, ರಾಮಬಾಬು ಮತ್ತು ಆತನ ಹೆಂಡತಿಗೆ ಮತ್ತು ಇತರರರಿಗೆ ಬ್ಯಾಂಕಿನಿಂದ ನೋಟಿಸ ಕೊಟ್ಟಿದ್ದು ಅದರ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಿಃ30-09-2013 ರಂದು HDFC Mutual Fund Bank ನಿಂದ ನೋಟಿಸ ಕೊಟ್ಟಿದ್ದು ಅದನ್ನು ನಿಪಿ-5 ಎಂದು ಅದೇ ದಿನ 30-09-2013 ರಂದು Reliance Money ಇವರಿಗೆ ಕೊಟ್ಟ ನೋಟಿಸಿನ ನಕಲುನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದಿಃ30-09-2013 ರಂದು Birla Sunlight Company ಗೆ ನೋಟಿಸ ಕೊಟ್ಟಿದ್ದು ನಿಪಿ-7 ಎಂದು,WP ನಂಬರ 203563/2014 ದಲ್ಲಿ ರೋಜನಾಮಾದ ನಕಲು ಹಾಜರುಪಡಿಸಿದ್ದು ಅದು ನಿಪಿ-8 ಎಂದು, WP ನಂಬರ 203563/2014 ಅರ್ಜಿಯ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, WP ನಂಬರ 203563/2014 ದಲ್ಲಿ ಸಲ್ಲಿಸಿದ ತಕರಾರಿನ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ತೆಲಗು ಭಾಷೆಯಲ್ಲಿರುವ ಕ್ರಯ ಪತ್ರದ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಅದರ ಇಂಗ್ಲೀಷ ಅನುವಾದ ನಿಪಿ-11(ಎ) ಎಂದು, ದಿಃ 23-12-2004 ರ ತೆಲಗು ಭಾಷೆಯಲ್ಲಿರುವ ಕ್ರಯ ಪತ್ರದ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು ಅದರ ಇಂಗ್ಲೀಷ ಅನುವಾದ ನಿಪಿ-12(ಎ) ಎಂದು, ದಿಃ 20-02-2009 ರ ತೆಲಗು ಭಾಷೆಯಲ್ಲಿರುವ



**OS. No.61/2013**
**P.W-1**

ಕ್ರಯ ಪತ್ರದ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು ಅದರ ಇಂಗ್ಲೀಷ ಅನುವಾದ ನಿಪಿ-13(ಎ) ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ವಾದಿ ಬ್ಯಾಂಕಿಗೆ ತನ್ನ ಗಂಡನಿಗೆ ಬರಬೇಕಾದ ಎಲ್ಲಾ ಸೌಲಭ್ಯಗಳನ್ನು ಜಮಾ ಮಾಡಿಕೊಳ್ಳಬೇಕಂದು ಬ್ಯಾಂಕಿಗೆ ಪತ್ರ ಕೊಟ್ಟಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಕೆಲವೊಂದು ದಾಖಲೆಗಳನ್ನು ತರಿಸಿಕೊಂಡಿದ್ದು ಅವುಗಳನ್ನು ಪರಿಶೀಲಿಸಿ ಮುಂದಿನ ವಿಚಾರಣೆಗೆ ಅವಕಾಶ ಕೋರಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ